ಇ) ವಿವರವಾದ ಯೋಜನಾ ವರದಿಯ ತಯಾರಿಕೆಯು ಮುಕ್ತಾಯದ ಹಂತದಲ್ಲಿರುತ್ತದೆ.

ಈ) ವಿವರವಾದ ಯೋಜನಾ ವರದಿಗೆ ಅನುಮೋದನೆಯನ್ನು ನೀಡಿ, ಇದೇ ಆರ್ಥಿಕ ಸಾಲಿನಲ್ಲಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.

ಅ) ತಡೆ ಹಿಡಿಯಲಾದ ಪ್ರಶ್ನೆಗಳು :

ಅಧ್ಯಕ್ಷರು : ಶ್ರೀ ಪಾಟೀಲ್ ಶಿವಾನಂದ ಸಿದ್ರಾಮಗೌಡರು : ಅವರೂ ಇಲ್ಲ.

ಇ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ದಿನಾಂಕ 1-8-03ರ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಪಟ್ಟಿಯಲ್ಲಿರುವ 87 ಪ್ರಶ್ನೆಗಳ ಪೈಕಿ 75 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ. (ಅನುಬಂಧ -1)

ಅಧ್ಯಕ್ಷರು : ಮಂಡಿಸಲಾಯಿತು. ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು.

4. ನಿಲುವಳಿ ಸೂಚನೆ ಮಂಡನೆಗೆ ಅವಕಾಶ ನೀಡಬೇಕೆಂದು ವಿರೋಧ ಪಕ್ಷದವರಿಂದ ಧರಣಿ ಮುಂದುವರಿಕೆ

ಗೊಂದಲ

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಇವರು ಹೀಗೆ ಗೂಂಡಾಗಿರಿ ಮಾಡುವುದಕ್ಕಾಗುವುದಿಲ್ಲ. ಸದನ ನಡೆಸುವುದೆಂದರೆ ಗೂಂಡಾಗಿರಿ ಮಾಡಿ ನಡೆಸುವುದಲ್ಲ. ನಿಯಮಗಳ ಪ್ರಕಾರ ನಡೆಸಬೇಕು.

ಗೊಂದಲ

ಅಧ್ಯಕ್ಷರು : ತಾವು ಕುಳಿತುಕೊಳ್ಳುತ್ತೀರೋ ಇಲ್ಲವೋ? ನೀವು ನಿಮ್ಮ ನಿಮ್ಮ ಸ್ಥಳಗಳಿಗೆ ಹೋಗಿ ಮಾತನಾಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) : ಇದೇನಿದು? ನಿನ್ನೆ ಚರ್ಚೆಯಾಯಿತು ಚರ್ಚೆಯಾದ ಮೇಲೆ ನಿಲುವಳಿ ಸೂಚನೆ ತರುವುದೇನೆಂದರೆ ಹೇಗೆ? ಅವರು ಅದನ್ನು ಬೇರೆ ಫಾರಂನಲ್ಲಿ ಬೇಕಾದರೆ ತೆಗೆದುಕೊಳ್ಳಲಿ;

ಅಧ್ಯಕ್ಷರು : ನಿನ್ನೆ ಪ್ರಸ್ತಾಪವಾಗಿದೆ. ನಾನೇ ಹೋಗಿ ಇನ್‌ಸ್ಪೆಕ್ಷನ್ ಮಾಡಿಕೊಂಡು ಬರುತ್ತೇನೆ ಎಂದು ಮಂತ್ರಿಗಳು ಹೇಳಿದ್ದಾರೆ. ಸಂಬಂಧಪಟ್ಟ ಲೋಕಲ್ ಎಂ.ಎಲ್.ಎ. ಯವರು ನಿನ್ನೆ ವಿಷಯ ಎತ್ತಿದ್ದಾರೆ. ಆಗ ನೀವು ನೋಡಲಿಲ್ಲ ಅಷ್ಟೇ. ನೀವು ಎಲ್ಲಿದ್ದಿರೋ? ಮಾನ್ಯ ಕರಡಿ ಸಂಗಣ್ಣನವರು ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಮಾನ್ಯ ಮಂತ್ರಿಗಳೂ ಉತ್ತರ ಹೇಳಿದ್ದಾರೆ. ಈಗ ನಾನು ಅಲೋ ಮಾಡುವುದಿಲ್ಲ. ನೀವು ಪ್ರೊಸೀಜರ್‌ಗೆ ಎಗೆನೆಸ್ಟಾಗಿ ಹೋಗುತ್ತಿದ್ದೀರಿ. ಈ ವಿಷಯ ನಿನ್ನೆ ಪ್ರಸ್ತಾಪವಾಗಿದೆ.

ಗೊಂದಲ

ಅಧ್ಯಕ್ಷರು : ಅವರು ಹೇಳುವುದನ್ನು ಕೇಳಿ. ನಿನ್ನೆ ಈ ವಿಷಯ ಚರ್ಚೆಯಾಗಿದೆ. ಸಂಬಂಧಪಟ್ಟ ಎಂ.ಎಲ್.ಎ ರವರು ಎತ್ತಿದ್ದಾರೆ. ಮಾನ್ಯ ಮಂತ್ರಿಗಳು, ನಾನೇ ಹೋಗಿ ಇನ್ಸ್‌ಪೆಕ್ಟ್ ಮಾಡಿಕೊಂಡು ಬಂದು ಉತ್ತರವನ್ನು ಕೊಡುತ್ತೇನೆ ಎಂದು ಹೇಳಿದ್ದಾರೆ ಈಗ ಪುನ: ಅದನ್ನೇ ಎರಡನೇ ಸಲ ಏಕೆ ಎತ್ತಬೇಕು? ಈಗ ನಾನು ಅಲೋ ಮಾಡುವುದಿಲ್ಲ. ನಿನ್ನೆ ವಿಷಯ ಪ್ರಸ್ತಾಪ ಆಗಿದೆ. ಪ್ರೊಸೀಡಿಂಗ್ಸ್

ತರಿಸುತ್ತೇನೆ, ನೋಡಿ. ಈ ರೀತಿ 2 ಸಲ 3 ಸಲ ಎತ್ತಲು ನಾನು ಅಲೋ ಮಾಡುವುದಿಲ್ಲ. ನೀವು ಏನಾದರೂ ಹೇಳಿ ನಾನು ಅಲೋ ಮಾಡುವುದಿಲ್ಲ. ನಾನು ಈ ಮನೆಯ ನಿಯಮಾವಳಿ ಪ್ರಕಾರ ಹೋಗುತ್ತೇನೆ. ನಿಯಮಾವಳಿಯ ಪ್ರಕಾರ ನಾನು ಸಭೆಯ ಅಭಿಪ್ರಾಯವನ್ನು ತೆಗೆದುಕೊಂಡಿದ್ದೇನೆ ಈ ಸಭೆಯ ಮಾನ್ಯ ಸದಸ್ಯರು ಪ್ರಶ್ನೋತ್ತರ ವೇಳೆ ಆಗಬೇಕೆಂದರು. ಪ್ರಶ್ನೆಗಳನ್ನು ಕೇಳಿ ಎಂದು ಕರೆದಿದ್ದೇನೆ, ಒಬ್ಬರೂ ಪ್ರಶ್ನೆಯನ್ನು ಕೇಳಲಿಲ್ಲ, ಕೇಳುವವರಿಗೆ ತಾವು ಅಡಚಣೆ ಮಾಡಿದಿರಿ. ಮಾನ್ಯ ಗೋಪಾಲ ಭಂಡಾರಿಯವರು ಪ್ರಶ್ನೆ ಕೇಳುವುದಕ್ಕೆ ಎದ್ದರೆ ಅದಕ್ಕೂ ನೀವು ಅವಕಾಶಕೊಡಲಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಇಲ್ಲಿ ನೋಡಿ ಇದು ಮಾನ್ಯ ಮಂತ್ರಿಗಳ ಉತ್ತರ. ಮಾನ್ಯ ಮಂತ್ರಿಗಳು ಕೊಟ್ಟಿರುವ ಉತ್ತರ ಪತ್ರಿಕೆಗಳಲ್ಲಿ ಬಂದಿದೆ. ದಯವಿಟ್ಟು ನಾವು ಹೇಳಲು ಅವಕಾಶ ಕೊಡಿ. ಈ ಗಂಭೀರವಾದ ವಿಷಯವನ್ನು ಹೇಳಲು ನಾನು ಹೊರಟಿದ್ದೇನೆ. ಸರ್ಕಾರ ಏಕೆ ಹಿಂದೇಟು ಹಾಕುತ್ತಿದೆ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಸಭಾಧ್ಯಕ್ಷರೇ, ದಯವಿಟ್ಟು ಕ್ಷಮಿಸಬೇಕು. ಸಂಖ್ಯಾ ಬಲದ ಆಧಾರದ ಮೆಲೆ ವಿಧಾನಸಭೆಯನ್ನು ನಡೆಸಿ ಇಡೀ ವಿರೋಧ ಪಕ್ಷದವರ ಬಾಯಿ ಮುಚ್ಚಿಸಿ.....

ಶ್ರೀ ಸಿ.ಎಸ್. ನಾಡಗೌಡ ಅಪಾಭಿ : ಸಂಖ್ಯಾದ ಬಲದ ಮೇಲಲ್ಲ, ನಿಯಮದ ಪ್ರಕಾರ....

ಗೊಂದಲ

ಶ್ರೀ ಯು.ಆರ್. ಸಭಾಪತಿ : ಸಂಖ್ಯಾಬಲದ ಮೇಲಲ್ಲ.

ಅಧ್ಯಕ್ಷರು : ಇಲ್ಲಿ ಸಂಖ್ಯಾ ಬಲದ ಪ್ರಶ್ನೆಯೇ ಬರುವುದಿಲ್ಲ.

ಶ್ರೀ ಯು.ಆರ್. ಸಭಾಪತಿ : ಸಂಖ್ಯಾ ಬಲ ಎಂದು ಮೇಲಿಂದ ಮೇಲೆ ಮಾತನಾಡುತ್ತೀರಿ. ನೀವು ಹೇಳಿದುದಕ್ಕೆಲ್ಲಾ ನಾವು ಹೌದು ಎಂದು ಹೇಳಬೇಕೇ?

ಗೊಂದಲ

ಶ್ರೀ ಬಿ. ಸೋಮಶೇಖರ್ : ಮಾನ್ಯ ಸಭಾಧ್ಯಕ್ಷರೇ, ನನಗೆ ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು : ಸಂಖ್ಯಾಬಲ ಎಂದು ಏಕೆ ಹೇಳುತ್ತೀರಿ. ಆ ರೀತಿ ಹೇಳಬೇಡಿ.

ಶ್ರೀ ಯು.ಆರ್. ಸಭಾಪತಿ : ಬಹುಸಂಖ್ಯಾತರ ವಿರುದ್ಧ ಇವರು ದಬ್ಬಾಳಿಕೆ ಮಾಡುತ್ತಿದ್ದಾರೆ. ನಾವು ಬಹುಮತ ಪಕ್ಷದಲ್ಲಿದ್ದೇವೆ. ಇವರು ನಮ್ಮ ಬಾಯಿ ಮುಚ್ಚಿಸುವುದು ಬೇಡ.

ಗೊಂದಲ

ಅಧ್ಯಕ್ಷರು : ಸಂಖ್ಯಾ ಬಲ ಎಂದು ಏಕೆ ಹೇಳುತ್ತೀರಿ? ನಿನ್ನೆ ಪ್ರಸ್ತಾಪ ಮಾಡಿರುವುದನ್ನೇ ಮನ: ಈಗ ಏಕೆ ಎತ್ತುತ್ತಾರೆ? ಈ ರೀತಿಯಾದರೆ, ನಾಳೆ ನಮಗೂ ಅವಕಾಶ ಕೊಡಿ ಎಂದು ಇನ್ನೊಂದು ನಾಲ್ಕು ಜನರು ಬರುತ್ತಾರೆ. ನನಗೆ ಗೊತ್ತಿದೆ, ನಿನ್ನೆ ಅವರು ಪ್ರಸ್ತಾಪ ಮಾಡಿದ್ದಾರೆ, ನಾನು ಟಿ.ವಿ.ಯಲ್ಲಿ ನೋಡಿದ್ದೇನೆ. ಸಭೆಯ ಅಭಿಪ್ರಾಯದಂತೆ ನಾನು ಹೋಗಬೇಕು, ಅದು ನನ್ನ ಕರ್ತವ್ಯ. 178 ಜನ ಒಂದು ಕಡೆ ಇದ್ದಾರೆ.

ಗೊಂದಲ

ಶ್ರೀ ಬಿ. ಸೋಮಶೇಖರ್ : ಹಾಗಾದರೆ ಸಭೆ ಒಂದು ಅನುಮತಿ ಕೊಡುತ್ತದೆ. ಮೆಜಾರಿಟಿ ಯಾವ ಪಕ್ಷಕ್ಕಿದೆ ಅವರಂತೆಯೇ ನಡೆಸಿ, ವಿರೋಧ ಪಕ್ಷದವರ್ಯಾರೂ ಮಾತನಾಡಬಾರದು ಎಂದು ಮಾಡಿಬಿಡಿ.

ಅಧ್ಯಕ್ಷರು : ಕೆಲವು ವಿಷಯಗಳನ್ನು ಮೆಜಾರಿಟಿ ಆಧಾರದ ಮೇಲೆಯೇ ತೀರ್ಮಾನ ಮಾಡಬೇಕಾಗುತ್ತದೆ.

ಗೊಂದಲ

ಶ್ರೀ ಬಿ. ಸೋಮಶೇಖರ್ : ಇಲ್ಲಿ ಯಾವುದೇ ನಿಯಮಾವಳಿಗಳು ಬೇಡ ಅದರ ಪ್ರಶ್ನೆಯೇ ಇಲ್ಲಿ ಬೇಡ. ಮೆಜಾರಿಟಿ ಇದ್ದರೆ ಅವರು ಮಾಡಿಕೊಳ್ಳಬಹುದೇ? ಇದಕ್ಕೆ ನಿಯಮಗಳೇಕ ಬೇಕು?

ಅಧ್ಯಕ್ಷರು : ಹಾಗಾದರೆ, ನಾಳೆಯೂ ಇದನ್ನೇ ತೆಗೆದುಕೊಳ್ಳಬಹುದೇ? ನೀವೂ ಹೀಗೆಯೇ ಮಾತನಾಡುತ್ತೀರಲ್ಲಾ

ಗೊಂದಲ

ಶ್ರೀ ಡಿ.ಬಿ. ಚಂದ್ರೇಗೌಡ : ಯಾವ ರೂಪದಲ್ಲಿ ಚರ್ಚೆ ಮಾಡಬೇಕೆಂದು ಅವರು ಹೇಳುತ್ತಿದ್ದಾರೆ. ಇದು ನಿಲುವಳಿ ಸೂಚನೆ ಹೇಗಾಗುತ್ತದೆ ಎಂದು ಹೇಳಿ.

ಅಧ್ಯಕ್ಷರು : ನಿನ್ನೆ ಪ್ರಸ್ತಾಪವಾಗಿದೆ ಎಂದು ಹೇಳಿದ ಮೇಲೂ ಮತ್ತೆ ಅದನ್ನೇ ಎತ್ತುತ್ತಿರುವುದನ್ನು ನೋಡಿ. ಮಾನ್ಯ ಮಂತ್ರಿಗಳು ಹೇಳಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಇದು ನಿಲುವಳಿ ಸೂಚನೆ ಹೇಗಾಗುತ್ತದೆ? ಅವರು ಹೇಳಿದ ತಕ್ಷಣ ನಿಲುವಳಿ ಸೂಚನೆಯಾಗುವುದಿಲ್ಲ.

ಅಧ್ಯಕ್ಷರು : ಇದು ನಿಲುವಳಿ ಸೂಚನೆ ಅಲ್ಲ : ಶೂನ್ಯವೇಳೆ ಇದರ ಬಗ್ಗೆ ನಿಲುವಳಿ ಸೂನೆಯನ್ನು ಯಾರೂ ಕೊಟ್ಟಿಲ್ಲ. ಪ್ರಶ್ನೋತ್ತರ ವೇಳೆ ಮುಗಿದ ನಂತರ ಎತ್ತಿ ಎಂದರೆ ಅಗೂ ಆಗುವುದಿಲ್ಲ. ಅವರು ಏತಿ ಅಂದರೆ ಪ್ರೇತಿ ಎನ್ನುತ್ತಾರೆ. ಅದಕ್ಕೋಂದು ಲೆಕ್ಕಚಾರ ಬೇಡವೇ? ನಾವು ಇವತ್ತು ಏನು ಮಾಡಿದ್ದೇವೆ ಎನ್ನುವುದನ್ನು ಜನರೇ ಡಿಸೈಡ್ ಮಾಡಲಿ.

ಶ್ರೀ ಜಗದೀಶ್ ಶೆಟ್ಟರ್ : ಸರ್ಕಾರ ಇವತ್ತು ರೈತರ ಬಗ್ಗೆ ಏನು ಮಾಡುತ್ತಿದೆ.....

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇದು ಬಹು ಸಂಖ್ಯಾತ ಸದಸ್ಯರ ಮೇಲೆ ಅಲ್ಪಸಂಖ್ಯಾತ ಸದಸ್ಯರ ದಬ್ಬಾಳಿಕೆ. ಮಾತನಾಡುವಾಗ ಯಾರಾದರೂ ನಿಮ್ಮ ಬಾಯಿ ಮುಚ್ಚಿದರೇನು? ನಿನ್ನೆ ಶೂನ್ಯವೇಳೆಯಲ್ಲಿ ಇದನ್ನು ಪ್ರಸ್ತಾಪ ಮಾಡಿದಾಗ ಮಾತನಾಡಬೇಕಿತ್ತು. ಅದಕ್ಕೆ ಬೇಡ ಅಂದರೇನು?

ಅಧ್ಯಕ್ಷರು : ನಿನ್ನೆ ಮಾತನಾಡಬಹುದಿತ್ತಲ್ಲ. ಏಕೆ ಹೀಗೆ ಮಾಡಿದರು? ವಿರೋಧ ಪಕ್ಷದವರು ನಿನ್ನೆ ಇದರ ಬಗ್ಗೆ ಮಾತನಾಡಬೇಕು ಎಂದರೆ ನಾನು ಅಲೋ ಮಾಡುತ್ತಿದ್ದೆ. ನಿನ್ನೆ ಸುಮ್ಮನಿದ್ದು ಇವತ್ತು ಮತ್ತೆ ಎತ್ತುತ್ತಿದ್ದಾರೆ. ಹೀಗಾದರೆ, ನಾಳೆ ಮತ್ತೆ ಇನ್ನೊಂದು ನಾಲ್ಕು ಜನರು ಮಾತನಾಡುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ : ಏನಾಗಿದೆ ಎನ್ನುವಂಥಾದ್ದರ ಬಗ್ಗೆ ಪತ್ರಿಕೆಗಳಲ್ಲಿ ವರದಿ ಬಂದಿದೆ. ಮಂತ್ರಿಗಳು ಹೇಳುತ್ತಾರೆ.....

ಅಧ್ಯಕ್ಷರು : ತಾವೇ ಇನ್ಕ್ವೆರಿ ಮಾಡಿ ಬಂದು ಹೇಳುತ್ತೇನೆ ಎಂದು ಮಂತ್ರಿಗಳು ಹೇಳಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಪದೇ ಪದೇ ಇವರು ನಿಮ್ಮನ್ನು ಥಾಲೆಂಜ್ ಮಾಡುತ್ತಿದ್ದಾರೆ. ಇವರು ಯಾವಾಗಲೂ ಕೂಡ ಥಾಲೆಂಜ್ ಕೊಟ್ಟುಕೊಂಡು ಹೋಗುತ್ತಿದ್ದಾರೆ. ಈ ರೀತಿಯಾಗಿ ಸದನ ನಡೆದರೆ ಅದು ಯಾರಿಗೂ ಗೌರವ ತರುತಕ್ಕಂಥಾದ್ದು ಅಲ್ಲ. ನಾವು ಏನಾದರೂ ಮಾಡಿದರೆ ನಮಗೆ ಟೀಕೆ ಮಾಡಲಿ. ಆದರೆ ತಾವು ಹೇಳಿದ ಮೇಲೂ

ಇಬ್ಬರನ್ನೂ ಸಮಾನ ದೃಷ್ಟಿಯಿಂದ ನೋಡತಕ್ಕಂಥ ಅಧ್ಯಕ್ಷರಿಗೆ ಅಗೌರವ ತೋರಿಸತಕ್ಕಂಥ ರೀತಿಯಲ್ಲಿ ಮಾತನಾಡುವುದೇ ಆದರೆ ಇವರಿಗೆ ಏನು ಹೇಳಬೇಕು.

ಶ್ರೀ ಜಗದೀಶ್ ಶೆಟ್ಟರ್ : ಇವರು ರೈತರ ಹಕ್ಕುಗಳನ್ನು ಮೊಟಕುಗೊಳಿಸುತ್ತಿದ್ದಾರೆ, ರೈತರನ್ನು ಸಾಯಿಸುತ್ತಿದ್ದಾರೆ. ಅವರು ಹಸಿವಿನಿಂದ ಸಾಯುತ್ತಿದ್ದಾರೆ.

ಅಧ್ಯಕ್ಷರು : ನಾಳೆ ಮತ್ತೆ ಒಂದೈದು ಜನ ಎದು ಇವರ ಬಗ್ಗೆ ಮಾತನಾಡಿದರೆ ಈ ವಿಷಯವನ್ನು ಮತ್ತೆ ತೆಗೆದುಕೊಳ್ಳಬೇಕೇ? ಏನಿದು? ನೀವು ನಿನ್ನೆ ಮತನಾಡಬಹುದಿತ್ತು. ಚಂದ್ರೇಗೌಡರೇ, ನೀವು ಹೇಳಿ.

ಗೊಂದಲ

ಅಧ್ಯಕ್ಷರು : ಇದು ನಿಲುವಳಿ ಸೂಚನೆ ಅಲ್ಲ ನೀವ್ಯಾರೂ ನಿಲುವಳಿ ಸೂಚನೆ ಕೊಟ್ಟಿಲ್ಲ. ನೀವು ಎತ್ತುತ್ತಿರುವುದು ಶೂನ್ಯವೇಳೆಯಲ್ಲಿ.

5. ಅಧ್ಯಕ್ಷರ ತೀರ್ಪು

'ಧರಣಿ ನಿರತರಾಗಿ ಸದನದ ಕಲಾಪಕ್ಕೆ ಅಡ್ಡಿಪಡಿಸುತ್ತಿದ್ದ ಬಿ.ಜೆ.ಪಿ ಸದಸ್ಯರನ್ನು ಕರ್ನಾಟಕ ವಿಧಾನಸಭೆಯ ಕಾರ್ಯ ವಿಧಾನ ಮತ್ತು ನಿಯಮ 347ರ ಪ್ರಕಾರ ಸದನದಿಂದ ಹೊರಗೆ ಕಳುಹಿಸುವುದರ ಬಗ್ಗೆ

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು-ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳ 347ನೇ ನಿಯಮದ ಪ್ರಕಾರ "ಅಧ್ಯಕ್ಷರು ಯಾವ ಸದಸ್ಯರ ನಡವಳಿಕೆಯು ತುಂಬಾ ಅಸಭ್ಯವಾಗಿದೆಯೆಂದು ಭಾವಿಸುತ್ತಾರೋ, ಅಂಥ ಸದಸ್ಯರಿಗೆ ಸದನದಿಂದ ಕೂಡಲೇ ಹೊರಗೆ ಹೋಗುವಂತೆ ಆದೇಶಿಸಬಹುದು ಮತ್ತು ಆ ರೀತಿ ಹೋಗಬೇಕೆಂದು ಆದೇಶ ಮಾಡಿದ ಯಾರೇ ಸದಸ್ಯರು ಕೂಡಲೇ ಸಭೆಯಿಂದ ಹೊರಗೆ ಹೋಗಬೇಕು ಮತ್ತು ಆ ದಿನದ ಉಪವೇಶನದ ಉಳಿದ ಸಮಯದಲ್ಲಿ ಅವರು ಗೈರು ಹಾಜರಾಗತಕ್ಕದ್ದು" ಎಂದು ಇದೆ. ಅದರಂತೆ ತಾವು 347 ನೇ ವಿಧಿಯಂತೆ ಅವರನ್ನು ಹೊರಗೆ ಹೋಗುವಂತೆ ಆಜ್ಞೆ ಮಾಡಬೇಕು. ಅದನ್ನು ಪಾಲನೆ ಮಾಡದಿದ್ದರೆ.....

ಗೊಂದಲ

ಶ್ರೀ ಡಿ.ಬಿ. ಚಂದ್ರೇಗೌಡ : ಸಭೆಯನ್ನು ಈ ರೀತಿ ನಡೆಸಲು ಸಾಧ್ಯವಿಲ್ಲ. ಇದು ದಬ್ಬಾಳಿಕೆಯಾಗುತ್ತದೆ, ಇದು ಗೂಂಡಾಗಿರಿಯಾಗುತ್ತದೆ. ಈ ರೀತಿಯ ಕೆಲವೇ ಜನರ ದಬ್ಬಾಳಿಕೆಗೆ ತಾವು ಮಣಿಯಬಾರದು ಎಂದು ನಾನು ತಮ್ಮಲ್ಲಿ ಮನವಿ ಮಾಡಿ 347 ನೇ ನಿಯಮದ ಪ್ರಕಾರ ಅವರನ್ನು ಪೆಸರಿಸಿ ಹೊರಗೆ ಕಳುಹಿಸಬೇಕೆಂದು ಹೇಳುತ್ತಿದ್ದೇನೆ

ಅಧ್ಯಕ್ಷರು : 347ನೇ ನಿಯಮದ ಪ್ರಕಾರ ಸದಸ್ಯರನ್ನು ಸಭೆಯ ಹೊರಗೆ ಕಳುಹಿಸಬೇಕೆಂದು ಮಾನ್ಯ ಸಂಸದೀಯ ಸಚಿವರು ಹೇಳಿರುವುದರಿಂದ "ಯಾವ ಸದಸ್ಯರ ನಡವಳಿಕೆಯು ತುಂಬಾ ಅಸಭ್ಯವಾಗಿದೆಯೆಂದು ಭಾವಿಸುತ್ತಾರೋ" ಅಂಥ ಸದಸ್ಯರಿಗೆ ಸದನದಿಂದ ಕೂಡಲೇ ಹೊರಗೆ ಹೋಗುವಂತೆ ಆದೇಶಿಸಬಹುಮ ಮತ್ತು ಆ ರೀತಿ ಹೋಗಬೇಕೆಂದು ಆದೇಶ ಮಾಡಿದ ಯಾರೇ ಸದಸ್ಯರು ಕೂಡಲೇ ಸಭೆಯಿಂದ ಹೊರಗೆ ಹೋಗಬೆಕು ಮತ್ತು ಆ ದಿನದ ಉಪವೇಶನದ ಉಳಿದ ಸಮಯದಲ್ಲಿ ಅವರು ಗೈರು ಹಾಜರಾಗತಕ್ಕದ್ದು ಅಂದರೆ ಇದು ಇವತ್ತಿಗೆ ಮಾತ್ರ ಅನ್ವಯವಾಗುತ್ತದೆ. ನಾನು ಈಗ 347ನೇ ನಿಯಮಾವಳಿಯನ್ನು ಉಪಯೋಗಿಸುತ್ತಿದ್ದೇನೆ. ದಯವಿಟ್ಟು ಈ ಕೆಳಕಂಡ ಮಾನ್ಯ ಸದಸ್ಯರು ಹೊರಗೆ ಹೋಗಬೇಕು:-